


ಬ್ಲೌಸ್ ಇರುತ್ತದೆ. ಈ ಸಿಲೌಟ್ ಮಾದರಿಯಲ್ಲಿ ಹೆಚ್ಚಾಗಿ ಧೋತಿ ಹಾಗೂ ಬೆಲ್‌ಬಾಟಮ್ ಪ್ಯಾಂಟ್‌ಗಳ ಬಳಕೆಯಿರುತ್ತದೆ. ಈಚೀಚೆಗೆ ಬಾಲಿವುಡ್ ಬೆಡಗಿಯರ ನೆಚ್ಚಿನ ಶೈಲಿಯಾಗಿದ್ದು, ಒಂದೇ ಬಟ್ಟೆಯಲ್ಲಿ ಧೋತಿ, ಸೀರೆಯ ನೆರಿಗೆ ಹಾಗೂ ಪಲ್ಲು ಮೂರನ್ನು ಹೊಲಿದಿರಲಾಗಿರುತ್ತದೆ. ನೋಡಲು ಆಕರ್ಷಕವಾಗಿ ಕಾಣುವ ಈ ಧೋತಿಗೆ ಎರಡೂ ಕಡೆ ಜೇಬಿರುತ್ತದೆ. ಇನ್ನು ಹೈಬ್ರಿಡ್ ಸಿಲೌಟ್‌ನಲ್ಲಿ ಸೀರೆ ಹಾಗೂ ಪ್ಯಾಂಟ್‌ಸೂಟ್ ಎರಡನ್ನೂ ಒಳಗೊಂಡ ವಿನ್ಯಾಸವನ್ನು ಕಾಣಬಹುದು.

## ಎಂಬ್ರಾಯ್ಡರಿ ಜಂಪ್‌ಸೂಟ್

ಉದ್ದದ ಸ್ಕರ್ಟ್‌ನಂತೆ ಕಾಣುವ ಈ ಜಂಪ್‌ಸೂಟ್‌ಗಳು ಅಗಲವಾದ ಪ್ಯಾಂಟುಗಳು. ಅವುಗಳ ಮೇಲೆ ಟಾಪ್. ಎಂಬ್ರಾಯ್ಡರಿ ಅದರಲ್ಲಿಯೂ ಲಖನೌದಲ್ಲಿ ಹೆಚ್ಚು ಬಳಕೆಯಲ್ಲಿರುವ ಚಿಂಕಾರಿ ಎಂಬ್ರಾಯ್ಡರಿ ವಿನ್ಯಾಸಗದ್ದರೆ ಚೆನ್ನಾಗಿರುತ್ತದೆ. ಸಾಮಾನ್ಯವಾಗಿ ಮಸ್ಲಿನ್ ಅಥವಾ ಜಾರ್ಜೆಟ್ ಬಟ್ಟೆಯ ಮೇಲೆ ಗಾಢವಾದ ಚಿಂಕಾರಿ ಎಂಬ್ರಾಯ್ಡರಿ ವಿನ್ಯಾಸವಿರುವ ಜಂಪ್‌ಸೂಟ್ ಸದ್ಯಕ್ಕೆ ಸಾಂಪ್ರದಾಯಿಕ ಕಾರ್ಯಕ್ರಮಗಳಿಗೂ ಸೂಕ್ತವೆನಿಸುತ್ತದೆ.

## ಗಾಗ್ರಾ ವಿದ್ ಟಿ ಶರ್ಟ್

ಮದುವೆಯ ಸಮಯದಲ್ಲಿ ಬೆಳಿಗ್ಗೆ ಹಾಗೂ ರಾತ್ರಿ ನಡೆಯುವ ಸಮಾರಂಭಗಳಿಗೆ ಈ ಗಾಗ್ರಾ ಜತೆಗೆ ಟಿ ಶರ್ಟ್ ಟಾಪ್ ವಿನ್ಯಾಸದ ಬಟ್ಟೆಗಳು ಸೂಕ್ತವೆನಿಸುತ್ತವೆ. ಬಹಳ ಗಾಢ ಬಣ್ಣದ ಗಾಗ್ರಾದ ಜತೆಗೆ ಚಿಕ್ಕದಾದ ಬಿಳಿ ಬಣ್ಣದ ಟಿ ಶರ್ಟ್‌ಗಳು ಹೊಂದುತ್ತವೆ. ಬಿಳಿ ಬಣ್ಣದ ಆಫೀಸ್ ವೇರ್ ಶರ್ಟ್ ಧರಿಸಿಯೂ ಇನ್‌ಶರ್ಟ್ ಮಾಡಬಹುದು. ಇದರ ಮೇಲೆ ಆಕ್ಸಿಡೈಜ್ಡ್ ಆಭರಣಗಳನ್ನು ತೊಡಬಹುದು. ಚಿಂಕಾರಿ ಎಂಬ್ರಾಯ್ಡರಿ ಇರುವ ಗಾಗ್ರಾ ಆಯ್ಕೆ ಮಾಡಿಕೊಂಡರೆ ಎಲಿಗೆಂಟ್ ಆಗಿಯೂ ಕಾಣಿಸಬಹುದು.

## ಫ್ಲೇರ್ಡ್ ಸ್ಕರ್ಟ್ ಜಾಕೆಟ್

ಮನೆ ಹಾಗೂ ಕಚೇರಿ ಎರಡೂ ಕಡೆ ಬ್ಯುಸಿ ಇರುವ ಹೆಣ್ಣುಮಕ್ಕಳಿಗೆ ಫ್ಯಾಷನ್ ಕಡೆಗೆ ಹೆಚ್ಚು ಗಮನ ಕೊಡಲು ಸಾಧ್ಯವಾಗದೆ ಹೋಗಬಹುದು. ಆಗೆಲ್ಲ ಬಣ್ಣದ ಬಣ್ಣದ ನೆರಿಗೆಗಳಿರುವ ಎಥ್ನಿಕ್ ಪ್ರಿಂಟ್ ಇರುವ ಉದ್ದನೆಯ ಸ್ಕರ್ಟ್‌ಗಳಿಗೆ ಟ್ಯಾಂಕ್ ಟಾಪ್ ಧರಿಸಬಹುದು. ಇದರ ಮೇಲೆ ಕಚ್ಛಿ ಎಂಬ್ರಾಯ್ಡರಿ ಇರುವ ಜಾಕೆಟ್ ಅಥವಾ ಕಾಶ್ಮೀರಿ ಪ್ರಿಂಟೆಡ್ ಜಾಕೆಟ್ ಧರಿಸಬಹುದು. ನೆರಿಗೆ ಇರುವ ಸ್ಕರ್ಟ್ ಬೇಡ ಎನಿಸಿದರೆ ಜೀನ್ಸ್ ಪ್ಯಾಂಟ್ ಟಾಪ್ ಧರಿಸಿ ಅದರ ಮೇಲೆ ಉದ್ದನೆಯ ಜಾಕೆಟ್ ಧರಿಸಿ ಆಫೀಸಿಗೆ ಹೋಗಬಹುದು.

## ಗೌನ್

ಉದ್ದನೆಯ ಗೌನ್‌ಗಳನ್ನು ಧರಿಸಿದರೆ ಎಲಿಗೆಂಟ್ ಆಗಿಯೂ ಕಾಣಬಹುದು. ನ್ಯೂಟ್ರಲ್ ಅಥವಾ ತಿಳಿ ಬಣ್ಣದ ಗೌನ್‌ಗಳನ್ನು ಆಯ್ಕೆ ಮಾಡಿ. ಇದರ ಜತೆ ಚಿಕ್ಕ ಚಿಕ್ಕ ಜುಮ್ಕಾ ಹಾಗೂ ಕಡ ಧರಿಸಿ. ಗಾಢ ಬಣ್ಣದ ಗೌನ್‌ಗಳನ್ನು ಆಯ್ಕೆ ಮಾಡಿಕೊಳ್ಳದೇ ಇದ್ದರೆ ಒಳ್ಳೆಯದು. ಈ ವಿನ್ಯಾಸದ ಗೌನ್ ಆಫೀಸಿಗೆ ಆರಾಮದಾಯಕ.

## ಫ್ಯೂಷನ್‌ಗೆ ಒಂದಿಷ್ಟು ಸಲಹೆಗಳು

- ಈ ಮಿಕ್ಸ್ ಆ್ಯಂಡ್ ಮ್ಯಾಚ್‌ನ ಆಟದಲ್ಲಿ ಅಗತ್ಯವಾಗಿ ತಿಳಿಯಬೇಕಿರುವುದು ದಿರಿಸಿನ ಬಣ್ಣ ಹಾಗೂ ಮೆಟೀರಿಯಲ್ ಆಯ್ಕೆ ಮಾಡುವ ಕುಶಲತೆ. ಗಾಢ ಹಾಗೂ ತಿಳಿ ಬಣ್ಣ, ಬಟ್ಟೆಯ ಗುಣಮಟ್ಟ ಹಾಗೂ ಆಕ್ಸೆಸರಿಗಳ ಬಗ್ಗೆಯೂ ಯೋಚಿಸಿ.
- ಎಂಥ ಕಾರ್ಯಕ್ರಮಕ್ಕೆ ಯಾವ ಬಣ್ಣ ಸೂಕ್ತ ಎಂಬುದರ ಅರಿವಿರಬೇಕು. ಗಾಢ ಬಣ್ಣಕ್ಕೆ ಎಂಥ ಆ್ಯಕ್ಸೆಸರಿಗಳು ಹೊಂದುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಹಲವು ಬಗೆಯ ಬಟ್ಟೆ ಹಾಗೂ ಆ್ಯಕ್ಸೆಸರಿಗಳನ್ನು ಒಂದು ಕಡೆ ಹಾಕಿ ಫ್ಯೂಷನ್ ಆಗಿಸುವುದರಿಂದ ಅವುಗಳು ಎಷ್ಟರಮಟ್ಟಿಗೆ ಬಳಕೆಗೆ ಯೋಗ್ಯ ಎಂಬುದರ ಕಡೆಗೂ ಗಮನ ಕೊಡಬೇಕು.
- ಆಕ್ಸೆಸರಿ ಜತೆ ಧರಿಸುವ ಚಪ್ಪಲಿಗಳ ಬಣ್ಣ, ವಿನ್ಯಾಸವೂ ಸೂಕ್ತವಾಗಿರುವಂತೆ ನೋಡಿಕೊಳ್ಳಿ.
- ಬಗೆ ಬಗೆಯ ಡ್ರೆಸ್ ಮೆಟೀರಿಯಲ್ ಅನ್ನು ಫ್ಯೂಷನ್ ಮಾಡಲು ಪ್ರಯತ್ನಿಸಿ. ಡೆನಿಮ್ ಜೀನ್ಸ್ ಜತೆ ಇಳಕಲ್ ಅಥವಾ ಮಧುಬನಿ ಪ್ರಿಂಟ್ ಇರುವ ತಿಳಿ ಬಿಳಿ ಹಾಗೂ ಗುಲಾಬಿ ಬಣ್ಣದ ಟಾಪ್ ಸೂಕ್ತವಾಗಬಹುದು.
- ಸಂಪೂರ್ಣ ಇಂಡೊ ವೆಸ್ಟರ್ನ್ ಇಷ್ಟವಿಲ್ಲದೆ ಹೋದರೆ ವೆಸ್ಟರ್ನ್ ಬಟ್ಟೆಗೆ ಇಂಡೊ ಶೈಲಿಯ ಜುವೆಲ್ಲರಿ ಧರಿಸಿದರೂ ಸಾಕು. ನಿರಂತರ ಪ್ರಯೋಗಶೀಲತೆಯನ್ನು ಕಾಪಾಡಿಕೊಂಡರೆ ಹೊಸ ಬಗೆಯ ಫ್ಯೂಷನ್ ರೂಪಿಸಲು ಸಹಾಯವಾಗುತ್ತದೆ.